# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1676 |
| ಮಾನ್ಯ ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಒಟ್ಟು ಎಷ್ಟು ಪೋಡಿ ಅರ್ಜಿಗಳು ಬಾಕಿ ಇವೆ; ಒಂದು ವರ್ಷಕ್ಕಿಂತ ಹೆಚ್ಚು ಕಾಲ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ಭೂಮಾಪನ ಹಾಗೂ ಪೋಡಿ ಕಾರ್ಯಕ್ಕಾಗಿ ಕಂದಾಯ ಇಲಾಖೆಯಲ್ಲಿ ಪ್ರತ್ಯೇಕ ಭೂಮಾಪಕರ ತಂಡವಿದೆಯೇ; ರಾಜ್ಯದಲ್ಲಿ ಸರ್ಕಾರದ ಭೂಮಾಪಕರ ಕೊರತೆ ಪೋಡಿ ಕಾರ್ಯಕ್ರಮದ ವಿಳಂಬಕ್ಕೆ ಕಾರಣವಾಗಿದೆಯೇ; | ಪ್ರಸ್ತುತ ರಾಜ್ಯದಲ್ಲಿ ಮೋಜಣಿ ತಂತ್ರಾಂಶದಲ್ಲಿ ಸಾರ್ವಜನಿಕರಿಂದ ಸ್ವೀಕೃತವಾದ ತತ್ಕಾಲ್ ಪೋಡಿ, ಬಗರ್ ಹುಕುಂ ಪೋಡಿ ಸೇರಿದಂತೆ ವಿವಿಧ ರೀತಿಯ ಒಟ್ಟು 2,11,576 ಪೋಡಿ ಅರ್ಜಿಗಳು ಬಾಕಿ ಇರುತ್ತವೆ.<br><br>ಈ ಪೈಕಿ 92,534 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ತಾಲ್ಲೂಕು ಕಛೇರಿಗಳಲ್ಲಿ ಮತ್ತು 1,19,042 ಅರ್ಜಿಗಳು ಅಳತೆ ಮತ್ತು ವಿವಿಧ ಹಂತದಲ್ಲಿ ಭೂಮಾಪನ ಇಲಾಖೆಯಲ್ಲಿ ಬಾಕಿಯಿರುತ್ತವೆ. ಬಾಕಿ ಇರುವ ಒಟ್ಟು 2,11,576 ಪೋಡಿ ಅರ್ಜಿಗಳ ಪೈಕಿ 73,905 ಅರ್ಜಿಗಳು ಒಂದು ವರ್ಷಕ್ಕಿಂತ ಮೇಲ್ಪಟ್ಟು ಬಾಕಿ ಇರುತ್ತವೆ.<br><br>ಭೂಮಾಪನ ಇಲಾಖೆಯಲ್ಲಿ ಪೋಡಿ ಕಾರ್ಯಕ್ಕಾಗಿ ಪ್ರತ್ಯೇಕ ಭೂಮಾಪಕರ ತಂಡವಿರುವುದಿಲ್ಲ.<br><br>ಇಲಾಖೆಯಲ್ಲಿ ಜಾರಿಯಲ್ಲಿರುವ ದರಖಾಸ್ತು ಪೋಡಿ ಆಂದೋಲನ, ಸ್ವಾಮಿತ್ವ, ನಕ್ಷಾ ಯೋಜನ, ಕಂದಾಯ ಅರಣ್ಯ ಜಮೀನು ಅಳತೆ ಇತ್ಯಾದಿ ಪ್ರಮುಖ ಯೋಜನೆಗಳ ಜೊತೆಯಲ್ಲಿ ಲಭ್ಯ ಭೂಮಾಪಕರ ಜೊತೆಗೆ ಪರವಾನಗಿ ಭೂಮಾಪಕರನ್ನು ಬಳಸಿಕೊಂಡು ಪ್ರಥಮ ಆದ್ಯತೆ ಮೇರೆಗೆ ದರಖಾಸ್ತು ಪೋಡಿ, ಮ್ಯುಟೇಷನ್ ಪೋಡಿ, ಪೋಡಿ ಮುಕ್ತ ಗ್ರಾಮ ಯೋಜನೆ, ಬಗರ್ ಹುಕುಂ ಪೋಡಿ, ಕೋರ್ಟ್ ಆದೇಶ ಇತ್ಯಾದಿ ಪ್ರಕರಣಗಳನ್ನು ಅಳತೆ ಮಾಡಲಾಗುತ್ತಿದೆ.<br><br>ಪ್ರಸ್ತುತ ರಾಜ್ಯದಲ್ಲಿ ಸಾರ್ವಜನಿಕರು ಅಳತೆ ಕೋರಿ ಸಲ್ಲಿಸುವ ಅರ್ಜಿಗಳಲ್ಲಿ ಯಾವುದೇ ಸಮಸ್ಯೆಗಳಿಲ್ಲದೇ ಇದ್ದಲ್ಲಿ ಸರಾಸರಿಯಾಗಿ ಸ್ವೀಕೃತಿಯಾದ ದಿನದಿಂದ 36 ದಿನಗಳು ಮತ್ತು ಭೂಮಾಪಕರಿಗೆ ಹಂಚಿಕೆಯಾದ ದಿನದಿಂದ 24 ದಿನಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ. |
| (ಆ) | ಖಾಸಗಿ ಭೂಮಾಪಕರಿಂದ ಪೋಡಿ ಕಾರ್ಯದಲ್ಲಿ ವಿಳಂಬ ಹಾಗೂ ರೈತರಿಂದ ಜಮೀನು ಮೌಲ್ಯದ ಶೇಕಡಾವಾರು ಹಣ ವಸೂಲಿ ಮಾಡುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದುವರೆಗೆ ಬಂದ ದೂರುಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ; | ಬಂದಿದೆ.<br><br>ಯಾವುದೇ ಪರವಾನಗಿ ಭೂಮಾಪಕರು ಪೋಡಿ ಪ್ರಕರಣಗಳ ವಿಲೇವಾರಿಗೆ ವಿಳಂಬ ಮಾಡುತ್ತಿರುವ ಅಥವಾ ಸಾರ್ವಜನಿಕರಿಂದ ಹಣದ ಬೇಡಿಕೆ ಇಟ್ಟಿರುವ ಬಗ್ಗೆ ನಿರ್ದಿಷ್ಟವಾದ ದೂರುಗಳು ಸ್ವೀಕೃತವಾದ ತಕ್ಷಣ ಸಂಬಂಧಿಸಿದ ಭೂದಾಖಲೆಗಳ ಜಂಟಿ ನಿರ್ದೇಶಕರು/ಭೂದಾಖಲೆಗಳ ಉಪ ನಿರ್ದೇಶಕರುಗಳಿಂದ ತನಿಖಾ ವರದಿ ಪಡೆದು, ವಿಚಾರಣೆ ನಡೆಸಿ ತಪ್ಪಿತಸ್ಥ ಪರವಾನಗಿ ಭೂಮಾಪಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ರಾಜ್ಯದಲ್ಲಿ ಪರವಾನಗಿ ಭೂಮಾಪಕರಿಂದ ಪೋಡಿ ಕಾರ್ಯದಲ್ಲಿ ವಿಳಂಬ ಮತ್ತು ರೈತರಿಂದ ಹಣ ವಸೂಲಿ ಮಾಡಿರುವ ಬಗ್ಗೆ ಒಟ್ಟು 916 ದೂರುಗಳು ಸ್ವೀಕೃತವಾಗಿವೆ. |

<table>
<tr>
<td></td>
<td></td>
<td>ವಿಚಾರಣೆ ನಡೆಸಿ ಪರವಾನಗಿ ಅಮಾನತ್ತು ಮಾಡಲಾಗುತ್ತದೆ. ಮಾನ್ಯ ಲೋಕಾಯುಕ್ತ ಪ್ರಾಧಿಕಾರದಲ್ಲಿ ಕೆಲವು ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 43 ಪರವಾನಗಿ ಭೂಮಾಪಕರುಗಳ ವಿರುದ್ಧ ತನಿಖೆ ನಡೆಸಲು ಅಭಿಯೋಜನಾ ಮಂಜೂರಾತಿ ನೀಡಲಾಗಿದೆ.<br><br>ದೂರು ಅರ್ಜಿಗಳಿಗೆ ಸಂಬಂಧಿಸಿದಂತೆ ಭೂದಾಖಲೆಗಳ ಜಂಟಿ ನಿರ್ದೇಶಕರು /ಭೂದಾಖಲೆಗಳ ಉಪ ನಿರ್ದೇಶಕರುಗಳಿಂದ ತನಿಖಾ ವರದಿ ಪಡೆದು, ವಿಚಾರಣೆ ನಡೆಸಿ 64 ಪ್ರಕರಣಗಳಲ್ಲಿ ತಪ್ಪಿತಸ್ಥ ಪರವಾನಗಿ ಭೂಮಾಪಕರುಗಳ ಪರವಾನಗಿಯನ್ನು ಅಮಾನತ್ತುಗೊಳಿಸುವ/ ಪರವಾನಗಿಯನ್ನು ರದ್ದುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.</td>
</tr>
<tr>
<td>(ಇ)</td>
<td>ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಒಟ್ಟು ಎಷ್ಟು ಮಂಜೂರಿದಾರರನ್ನು ಅಳತೆಗೆ ಸ್ವೀಕರಿಸಲಾಗಿದೆ; ಯೋಜನೆಯ ನಿರೀಕ್ಷಿತ ಗುರಿ ಮತ್ತು ಸಾಧನೆ ಶೇಕಡಾವಾರು ಎಷ್ಟು; ಅರ್ಜಿ ಸಲ್ಲಿಕೆಯಿಂದ ಇತ್ಯರ್ಥದವರೆಗೆ ಗರಿಷ್ಠ ಸಮಯ ಮಿತಿ (Time Limit) ನಿಗದಿ ಮಾಡಲಾಗಿದೆಯೇ; ಇಲ್ಲದಿದ್ದರೆ ಟೈಂ-ಬೌಂಡ್ ವ್ಯವಸ್ಥೆ ಜಾರಿಗೊಳಿಸುವ ಬಗ್ಗೆ ಸರ್ಕಾರದ ನಿರ್ಧಾರವೇನು;</td>
<td>ರಾಜ್ಯದಲ್ಲಿ ಖಾಸಗಿ/ಹಿಡುವಳಿ ಜಮೀನುಗಳ ಬಹು ಮಾಲೀಕತ್ವದ ಪಹಣಿಗಳನ್ನು ಏಕ ಮಾಲೀಕತ್ವಕ್ಕೆ ಪರಿವರ್ತಿಸುವ ಉದ್ದೇಶದಿಂದ ಪೋಡಿ ಮುಕ್ತ ಗ್ರಾಮ ಯೋಜನೆಯನ್ನು ಪ್ರಾರಂಭಿಸಿದ್ದು, ಈ ಯೋಜನೆಯಡಿ ಮಂಜೂರಿ ಜಮೀನುಗಳ ಪೋಡಿ ಕಾರ್ಯ ಕೈಗೊಂಡಿರುವುದಿಲ್ಲ.<br><br>ಸರ್ಕಾರದಿಂದ ವಿವಿಧ ರೀತಿಯಲ್ಲಿ ಮಂಜೂರಿಯಾದ ಜಮೀನುಗಳ ಪೋಡಿ ದುರಸ್ತಿ ಮಾಡುವ ಕುರಿತು ನಮೂನೆ 01 ರಿಂದ 05 ಮತ್ತು 06 ರಿಂದ 10 ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿದೆ. ಈ ಕುರಿತು ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿಪಡಿಸಿ ಕಡ್ಡಾಯವಾಗಿ ಸದರಿ ತಂತ್ರಾಂಶದ ಮೂಲಕವೇ ಕಡತಗಳ ನಿರ್ವಹಣೆ ಮಾಡಲಾಗುತ್ತಿದ್ದು, ಈಗಾಗಲೇ ಅನುಮೋದನಗೊಂಡಿರುವ ನಮೂನೆ 01 ರಿಂದ 05 ನ್ನು ಸಹ ಮತ್ತೊಮ್ಮೆ ತಂತ್ರಾಂಶದಲ್ಲಿ ದಾಖಲಿಸಿ ಅವಶ್ಯಕ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಅನುಮೋದಿಸಲಾಗುತ್ತಿದೆ.<br><br>ಪ್ರಸ್ತುತ ರಾಜ್ಯದಲ್ಲಿ ದರಖಾಸ್ತು ಪೋಡಿ ಅಭಿಯಾನವನ್ನು ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿದ್ದು, ಈ ಯೋಜನೆಯಡಿ ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ.<br>ರಾಜ್ಯದಲ್ಲಿ ಮಾಹೆ ಫೆಬ್ರುವರಿ-2026 ರ ಅಂತ್ಯಕ್ಕೆ ದರಖಾಸ್ತು ಪೋಡಿ ಅಭಿಯಾನದಡಿ ಸಾಧಿಸಿರುವ ಪ್ರಗತಿ ವಿವರ :-
<table>
<tr><th>ಅನುಬಂಧ-1 ನೀಡಿರುವ ಮಂಜೂರಿದಾರರ ಸಂಖ್ಯೆ</th><th>ಅಳತೆಗೆ ತೆಗೆದುಕೊಂಡಿರುವ ಮಂಜೂರಿದಾರರ ಸಂಖ್ಯೆ</th><th>ಅಳತೆ ಕಾರ್ಯ ಪೂರ್ಣಗೊಳಿಸಿರುವ ಮಂಜೂರಿದಾರರ ಸಂಖ್ಯೆ</th></tr>
<tr><td>2,05,211</td><td>1,70,224</td><td>1,45,970</td></tr>
</table>
ದರಖಾಸ್ತು ಪೋಡಿ ಅಭಿಯಾನದಡಿ ಅನುಬಂಧ-1 ನೀಡಿರುವ ಒಟ್ಟು 2,05,211 ಮಂಜೂರಿದಾರರ ಪೈಕಿ 1,70,224 (83%) ಮಂಜೂರಿದಾರರ ಜಮೀನು ಅಳತೆಗಾಗಿ ಆಯ್ಕೆ ಮಾಡಿಕೊಂಡಿದ್ದು, 1,45,970 (86%) ಮಂಜೂರಿದಾರರ ಜಮೀನಿನ ಅಳತೆ ಕಾರ್ಯ ಪೂರ್ಣಗೊಳಿಸಲಾಗಿದೆ.<br><br>ದರಖಾಸ್ತು ಪೋಡಿ ಅಭಿಯಾನದ ಕಾರ್ಯ ಪ್ರಗತಿಯಲ್ಲಿದ್ದು, ರಾಜ್ಯದಲ್ಲಿ ದರಖಾಸ್ತು ಪೋಡಿ ಅಭಿಯಾನವು ಸಂಪೂರ್ಣ, ಸಕರಾತ್ಮಕವಾಗಿ ಯಶಸ್ವಿಯಾಗಿ ಅನುಷ್ಠಾನವಾಗುತ್ತಿದೆ.</td>
</tr>
</table>

Scanned with OKEN Scanner

| | | |
|---|---|---|
| (ಈ) | ಪೋಡಿ ವಿಳಂಬದಿಂದ ರೈತರಿಗೆ ಜಮೀನು ಮಾರಾಟ, ಸಾಲ, ಸಹಾಯ ಧನ, ಭೂ ಪರಿವರ್ತನ ಸೇರಿದಂತೆ ಇತರ ಸೇವೆಗಳು ಲಭ್ಯವಾಗದಿರುವುದನ್ನು ಸರ್ಕಾರ ಒಪ್ಪುತ್ತದೆಯೇ; ಮೂಲ ಭೂದಾಖಲೆಗಳು ಮತ್ತು ಕಂದಾಯ ದಾಖಲೆಗಳ ವ್ಯತ್ಯಾಸ, ನ್ಯಾಯಾಲಯ ವ್ಯಾಜ್ಯಗಳು ಹಾಗೂ ಗಡಿ ತಕರಾರುಗಳಿಂದ ಉಂಟಾಗುತ್ತಿರುವ ವಿಳಂಬ ನಿವಾರಣೆಗೆ ಸಮಗ್ರ ಕಾರ್ಯ ಯೋಜನೆ ರೂಪಿಸಲಾಗಿದೆಯೇ; | ಪೋಡಿ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬವನ್ನು ತಪ್ಪಿಸಲು ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ತಂತ್ರಾಂಶದ ಮುಖಾಂತರ ಆನ್‌ಲೈನ್ ಮೂಲಕ ಸ್ವೀಕರಿಸಿ ನಿರ್ವಹಿಸಲಾಗುತ್ತಿದೆ. ತಂತ್ರಾಂಶದ ಎಲ್ಲ ಹಂತದಲ್ಲಿ ಸರದಿ ಸಾಲಿನಂತೆ (FIFO) ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಯಾವುದೇ ಜಮೀನಿನ ಭೂದಾಖಲೆಗಳು ನಶಿಸಿ /ಶಿಥಿಲವಾಗಿದ್ದಲ್ಲಿ ಅಂತಹ ಭೂದಾಖಲೆಗಳನ್ನು ಪುನರ್ ನಿರ್ಮಾಣ ಮಾಡುವ ಕುರಿತು ಕೈಗೊಳ್ಳಬಹುದಾದ ಕ್ರಮ ಮತ್ತು ಕಾರ್ಯ ವಿಧಾನಗಳ ವಿವಿಧ ಸುತ್ತೋಲೆಗಳ ಮೂಲಕ ತಿಳಿಸಲಾಗಿದ್ದು, ಅದರಂತೆ ಶಿಥಿಲವಾಗಿರುವ ಹಿಸ್ಸಾ ನಕಾಶೆಗಳನ್ನು (ಅಟ್ಲಾಸ್, FMB, ಸ್ಕೆಚ್ ನಕಾಶೆ, ಪಿ.ಟಿ.ಶೀಟ್) ಪುನರ್ ನಿರ್ಮಾಣ ಮಾಡಲಾಗುತ್ತಿದೆ.<br><br>ನ್ಯಾಯಾಲಯದ ವ್ಯಾಜ್ಯಗಳನ್ನು ನಿರ್ವಹಿಸುವ ಸಲುವಾಗಿ ಸಿ.ಸಿ.ಎಂ.ಎಸ್ ತಂತ್ರಾಂಶವನ್ನು ಮತ್ತು ಇಲಾಖೆಯ ವ್ಯಾಪ್ತಿಯಲ್ಲಿ ಹಕ್ಕು ಮತ್ತು ಗಡಿ ತಕರಾರು ಕುರಿತಂತೆ ದಾಖಲಾಗುವ ಪ್ರಕರಣಗಳನ್ನು ಪರಿಣಾಮಕಾರಿ ನಿರ್ವಹಣೆ/ ಮೇಲ್ವಿಚಾರಣೆ ಮತ್ತು ತ್ವರಿತವಾಗಿ ವಿಲೇ ಮಾಡುವ ಸಲುವಾಗಿ ಕಂದಾಯ ನ್ಯಾಯಾಲಯ ಪ್ರಕರಣ ಮಾನಿಟರಿಂಗ್ ವ್ಯವಸ್ಥೆ (RCCMS) ಜಾರಿಗೊಳಿಸಿದೆ.<br><br>ನ್ಯಾಯಾಲಯ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವ ಕುರಿತು ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ. |
| (ಉ) | ಪೋಡಿ ಕಾರ್ಯವನ್ನು ಸಂಪೂರ್ಣವಾಗಿ ಆನ್‌ಲೈನ್ ನಿಗಾ ವ್ಯವಸ್ಥೆಗೆ ತರಲು ಹಾಗೂ ಅರ್ಜಿದಾರರಿಗೆ ನೈಜ ಸ್ಥಿತಿ ತಿಳಿಯುವ ವ್ಯವಸ್ಥೆ ಕಲ್ಪಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? | ಪೋಡಿ ಕಾರ್ಯವನ್ನು ಸಂಪೂರ್ಣವಾಗಿ ಆನ್‌ಲೈನ್ ನಿಗಾ ವ್ಯವಸ್ಥೆಗೆ ತರುವ ಸಲುವಾಗಿ ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲಿ ಸ್ವೀಕರಿಸಲಾಗುತ್ತಿದ್ದು, ಮೋಜಿಣಿ ತಂತ್ರಾಂಶದ ಮೂಲಕವೇ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಿ, ಅಳತೆಯಾದ ನಂತರ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ತಂತ್ರಾಂಶದ ಮುಖಾಂತರ ಸರದಿ ಸಾಲಿನಂತೆ (FIFO) ನಿರ್ವಹಿಸುವ ಮೂಲಕ ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.<br><br>ಸಾರ್ವಜನಿಕರು ಅಳತೆ ಕೋರಿ ಸಲ್ಲಿಸಿರುವ ಯಾವುದೇ ಅರ್ಜಿಯ ಸ್ಥಿತಿ ಮತ್ತು ಅರ್ಜಿಯ ಕುರಿತು ಸಿಬ್ಬಂದಿಗಳ/ ಅಧಿಕಾರಿಗಳ ಲಾಗಿನ್‌ನಲ್ಲಿಯ ದಿನಾಂಕ ಸಹಿತ ಚಲನವಲನವನ್ನು ಇಲಾಖೆಯ ವೆಬ್‌ಸೈಟ್ https://clws.karnataka.gov.in/service27 ರಲ್ಲಿ ಪರಿಶೀಲಿಸಲು ಅವಕಾಶ ಕಲ್ಪಿಸಿದೆ. |

ಸಂಖ್ಯೆ: ಕಂಇ 79 ಎಸ್ ಎಸ್ ಸಿ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು